**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 02-09-2023.**

**ಮುಂದುವರೆದ ಪಾಟೀ ಸವಾಲು - 1 ನೇ ಪ್ರತಿವಾದಿಯ ಪರ ವಕೀಲರಿಂದ :**

**1)** ನಮ್ಮ ತಂದೆ ನನ್ನ ಪರವಾಗಿ ಮಾಡಿಕೊಟ್ಟ ವಿಲ್ ನಾಮೆಯನ್ನು ನಾನು ಓದಿರುತ್ತೇನೆ. ಸದರಿ ವಿಲ್ ನಾಮೆಯನ್ನು 4 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ವೆಂಕಟಮ್ಮ ರವರು ನಮ್ಮ ತಂದೆಯ ಜೀವಿತಕಾಲದಲ್ಲಿ ಅವರ ಜೊತೆಯಲ್ಲಿ ವಾಸವಿದ್ದರು. ನಮ್ಮ ತಂದೆಯನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಎಲ್ಲಾ ಹೆಣ್ಣು ಮಕ್ಕಳು ಹೋಗಿ ಬರುತ್ತಿದ್ದೆವು ಎಂದು ನುಡಿಯುತ್ತೇನೆ. ದಿ.18-07-1996 ರ ವಿಲ್ ನಾಮೆಯಲ್ಲಿ ನಮ್ಮ ತಂದೆ ಅವರ ಸ್ಥಿರಾಸ್ತಿಗಳು ಐದು ಜನ ಹೆಣ್ಣು ಮಕ್ಕಳಿಗೆ ಮಾತ್ರ ಸೇರಬೇಕು ಎಂದು ಬರೆದಿರುತ್ತಾರೆ. ಸದರಿ ವಿಲ್ ನಾಮೆಯಲ್ಲಿ ನಮೂದಿಸಿದ ಸ್ವತ್ತುಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ವಿಲ್ ನಾಮೆಯಲ್ಲಿ ನಾನು, 4 ಮತ್ತು 5 ನೇ ಪ್ರತಿವಾದಿಗಳಿಗೆ ಮಾತ್ರ ಸೇರಬೇಕು ಎಂದು ಬರೆದಿರುತ್ತಾರೆ. ಊರ ಬಳಿ ಇರುವ ಆಸ್ತಿಗಳಲ್ಲಿ ಐದೂ ಜನ ಹೆಣ್ಣು ಮಕ್ಕಳಿಗೆ ಪಾಲು ಬರಬೇಕು ಎಂದು ಬರೆದಿರುತ್ತಾರೆ. ಸದರಿ ವಿಲ್ ನಾಮೆಯಲ್ಲಿ ಮೈಲನಹಳ್ಳಿಯ ಸ್ಥಿರ ಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಗಳಿಗೆ ಮಾತ್ರ ಹೋಗಬೇಕು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ನಮ್ಮ ತಂದೆಯನ್ನು ನೋಡಿಕೊಳ್ಳುತ್ತಿದ್ದರಿಂದ ಅವರಿಗೆ ಹೆಚ್ಚಿನ ಆಸ್ತಿಯನ್ನು ನೀಡಬೇಕು ಎಂದು ನಮ್ಮ ತಂದೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ವಿಲ್ ನಾಮೆಯಲ್ಲಿ ಇರುವ ಆಸ್ತಿಗಳ ಹೊರತಾಗಿ ಬೇರೆ ಆಸ್ತಿಗಳನ್ನು ಹೊಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ 1998 ರಲ್ಲಿ ನಾವು ಒಂದು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ 1 ನೇ ಪ್ರತಿವಾದಿಗೆ ನಮ್ಮ ತಂದೆ ಹೇಳಿದ ಭಾಗ ಬಂದಿಲ್ಲ

ಎಂದು ಅವರು ವಿರೋಧಿಸಿರುತ್ತಾರೆ ಎಂದರೆ ಎಲ್ಲರೂ ವಿರೋಧಿಸಿದ್ದಾರೆ ಎಂದು ನುಡಿಯುತ್ತೇನೆ. ಹಾಗೆ ಎಲ್ಲರೂ ವಿರೋಧಿಸಿರುತ್ತಾರೆ ಎಂದು ವಾದ ಪತ್ರದಲ್ಲಿ ಹೇಳಿರುತ್ತೇನೆ. ವಿಭಾಗ ಪತ್ರದ ಫೋರ್ಜರಿ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದವರೆಗೆ ಹೋಗಿ ಅಲ್ಲಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರ್ವೋಚ್ಛ ನ್ಯಾಯಾಲಯದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಮತ್ತು 5, 6 ಮತ್ತು 7 ನೇ ಪ್ರತಿವಾದಿಗಳಿಗೆ ಶಿಕ್ಷೆಯಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ .

**5 ರಿಂದ 7 ನೇ ಮತ್ತು 9 ರಿಂದ 12 ನೇ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd./-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**